ಶ್ರೀ ಎ. ಜಿ. ರಾಮಚಂದ್ರರಾಯರು.—ಅದು ಬೇರೆ ವಿಷಯಕ್ಕೆ. ಇಂಡಿಯಾ ಸರ್ಕಾರದವರು ಕೆಲವು ಡಿಸ್ಟ್ರಿಕ್ಟುಗಳಲ್ಲಿ ಕೆಲವು ಗ್ರಾಮ, ಕೆಲವು ಹೋಬಳಿಗಳನ್ನು ಆರಿಸಿಕೊಂಡು ಸರ್ವೆ ನಡೆಸುತ್ತಾ ಇದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಅವರು ಮಾಡುತ್ತಿರುವ ಸರ್ವೆ ಎಷ್ಟು ವರ್ಷಕ್ಕೆ ಮುಗಿಯುತ್ತದೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

Sri A. G. RAMACHANDRA RAO.—It is not relevant to this issue. That is a different kind of survey.

Conversion of the New Type Middle Schools into Pukka Middle Schools.

Q.—92. Sri G. SIVAPPA (Holalkere).—

Will the Government be pleased to state:—

(*a*) the number of pukka middle schools and new type middle schools in the State;

(*b*) the number of new type middle schools granted in 1951-52;

(*c*) after what stage new type middle schools are converted into pukka middle schools;

(*d*) the usual qualifications of the Head Masters of new type middle schools;

(*e*) whether it is not the Head Master of the primary school that will usually work as the Head Master of the new type Middle school?

A.— Sri A. G. RAMACHANDRA RAO (Minister for Law and Education).—

(*a*) Pukka Middle Schools ... 728
New Type Middle Schools ... 647

(*b*) 54 (Fifty-four).

(*c*) When it is proved to the satisfaction of the Department that the New Type Middle Schools have worked satisfactorily with adequate strength in all the four Middle School Classes, the question of their gradual conversion into pukka Middle Schools will be considered as and when funds become available.

(*d*) M. S. or L. S. T. C. or U. S. T. C.

(*e*) Yes, more often.

ಶ್ರೀ ಜಿ. ಶಿವಪ್ಪನವರು.—ಎಲ್. ಟಿ. ಎಂ. ಸ್ಕೂಲ್‌ನಲ್ಲಿ ಇಂಗ್ಲೀಷ್ ಉಪಾಧ್ಯಾಯರು ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅಂಕಿ ಅಂಶ ಬಂದಿಲ್ಲ.

ಶ್ರೀ ಜಿ. ಶಿವಪ್ಪನವರು.—ಇಂಗ್ಲೀಷ್ ಉಪಾಧ್ಯಾಯರ ಅರ್ಹತೆ ಏನು?

ಶ್ರೀ ಎ. ಜಿ. ರಾಮಚಂದ್ರರಾಯರು.—ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಜಿ. ಶಿವಪ್ಪನವರು.—ಅದು ಹೆಡ್ಮಾಸ್ಟರವರಿಗೆ ಇರಬೇಕಾದ ಅರ್ಹತೆಗಳು. ಇಂಗ್ಲಿಷ್ ಉಪಾಧ್ಯಾಯರಿಗೆ ಇರಬೇಕಾದ ಅರ್ಹತೆಗಳೇನು ಎಂಬುದು ನನ್ನ ಪ್ರಶ್ನೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಅದು ವ್ಯತ್ಯಾನವಾಗುತ್ತದೆ.

ಶ್ರೀ ಜಿ. ಶಿವಪ್ಪನವರು.—ಎಸ್. ಎಸ್. ಎಲ್. ಸಿ. ಪಾಸ್ ಮಾಡಿರುವವರು ಉಪಾಧ್ಯಾಯರಾಗಿರುವುದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಎಲ್.ಟಿ.ಎಂ. ಸ್ಕೂಲ್‌ನಲ್ಲಿ ಎಸ್.ಎಸ್.ಎಲ್.ಸಿ. ಕೋರ್ಸ್ ಆಗಿರುವವರೂ ಇರುತ್ತಾರೆ.

ಶ್ರೀ ಜಿ. ಶಿವಪ್ಪನವರು.—ಆ ರೀತಿ ಎಸ್. ಎಸ್. ಎಲ್.ಸಿ. ಕೋರ್ಸ್ ಆಗಿದ್ದು ಲೋಯರ್ ಸೆಕೆಂಡರಿ ಪಾಸ್ ಮಾಡಿರುವವರನ್ನು ಹೆಡ್ಮಾಸ್ಟರಾಗಿ ಸೆಲೆಕ್ಟ್ ಮಾಡಿರುವುದು ಗೊತ್ತೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಎರಡು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇವರನ್ನು ನೇಮಕ ಮಾಡುವಾಗ length of service ಮತ್ತು ಖರ್ಚಿನ ಬಾಬತು ಇವೆರಡನ್ನೂ ಗಮನಿಸಿ ಕೆಲಸ ನಡೆಯುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಜಿ. ಶಿವಪ್ಪನವರು.—ಎಲ್. ಟಿ. ಎಂ. ಸ್ಕೂರ್ ಕೊಡಬೇಕಾದರೆ ಡಿಸ್ಟ್ರಿಕ್ಟ್‌ವಾರು ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೌದು.

ಶ್ರೀ ಜಿ. ಶಿವಪ್ಪನವರು.—ಸಾಮಾನ್ಯವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ವಿದ್ಯಾವಂತರ ಶೇಕಡಾವಾರು ಸಂಖ್ಯೆ ಹೆಚ್ಚಾಗಿಲ್ಲ, ಅದ್ದರಿಂದ ಅಲ್ಲಿಗೆ ಹೆಚ್ಚು ಸ್ಕೂಲುಗಳನ್ನು ಕೊಡಬೇಕು ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದು ಅಭಿಪ್ರಾಯದ ವಿಚಾರ.

ಶ್ರೀ ಜಿ. ಶಿವಪ್ಪನವರು.—ತಾವು ಹಿಂದೆ ಒಂದು ಸರ್ಕ್ಯುಲರ್ ಹೊರಡಿಸಿ ಸ್ಕೂಲು ಕಟ್ಟಿಡ ಕಟ್ಟಿಸಿಕೊಟ್ಟರೆ ಜಾಗ್ರತೆ ಸ್ಕೂಲು ಕೊಡುತ್ತೇವೆ ಎಂದು ಹೇಳಿದ್ದುದನ್ನು ಈಗ ಪಜಾ ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಪಜಾ ಮಾಡಿಲ್ಲ. ಅದು ಜಾರಿಗೆ ಕೊಡುವುದು ಕಷ್ಟವಾಗಿದೆ.

ಶ್ರೀ ಜಿ. ಶಿವಪ್ಪನವರು.—ಅನೇಕ ಕಡೆ ಕಟ್ಟಡ ಕಟ್ಟಿ ಸ್ಕೂಲು ಇಲ್ಲದೆ. ಹಾಗೆ ಇರುವುದರಿಂದ, ನ್ಯಾಷನಲ್ ಫಂಡ್ ದುರ್ವ್ಯಯವಾಗಿರುವುದು ಗೊತ್ತೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಆ ರೀತಿ ಒಂದು ದುಷ್ಪರಿಣಾಮ ಆಗಿರಬಹುದು.

ಶ್ರೀ ಟಿ. ಎಸ್ ಮೂಡಲಗಿರಿಗೌಡರು (ಕುಣಿಗಲು).—1951-52 ರಲ್ಲಿ ಮಂಜೂರು ಮಾಡಿದ ಎಲ್. ಟಿ. ಎಂ. ಮಿಡ್ಲ್‌ಸ್ಕೂಲುಗಳ ಪೈಕಿ ಗ್ರಾಮಾಂತರಗಳಲ್ಲಿರುವುದು ಎಷ್ಟು?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಟೀಸ್.